ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದೇವೆ. ಅವರ ಒಪ್ಪಿಗೆ ಪಡೆದ ತಕ್ಷಣ ಇನಸ್ಪೆಕ್ಟರನ್ನು ಅಲ್ಲಿಗೆ ನೇಮಿಸುತ್ತೇವೆ. ಜೊತೆಗೆ ಮುಂದಿನ ದಿನಗಳಲ್ಲಿ ಇನಸ್ಪೆಕ್ಟರ್ ನೇಮಿಸಿದ ನಂತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಉಳಿದಿರುವಂಥ ಎರಡು ಕೋರ್ಸುಗಳ ಬಗ್ಗೆ ಸರ್ಕಾರ ಗಮನ ಹರಿಸಿ ಗ್ರಾಮಾಂತರ ಪ್ರದೇಶದ ಯುವಕ ಯುವತಿಯರಿಗೆ ತರಬೇತಿ ಕೊಡುವುದರಲ್ಲಿ ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡು ಮುಂದಿನ ದಿನಗಳಲ್ಲಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುವ ತೀರ್ಮಾನ ಕೈಗೊಂಡಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಗ್ರಾಮಾಂತರ ಪ್ರದೇಶದ ಸೌವಲತ್ತನ್ನು, ಪಟ್ಟಣ ಕಡೆಗೆ ಕೊಂಡು ಹೋಗುವುದಿಲ್ಲ ಎನ್ನುವ ಭರವಸೆಯನ್ನು ನೀಡಿದ್ದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಮುಖ್ಯವಾದ ತೊಂದರೆ ಏನೆಂದರೆ ಸಾಕಷ್ಟು ತರಬೇತಿ ಕೊಡುವ ಶಿಕ್ಷಕರು ಇಲ್ಲದೇ ಇರುವುದು ಪೇಟೆ ಪಟ್ಟಣದವರು ಇಲ್ಲಿಗೆ ಬರುವುದಿಲ್ಲ. ಒಂದು ವೇಳೆ ಇಲ್ಲಿಗೆ ಪೇಟೆ ಪಟ್ಟಣದ ಸವಲತಗಳನ್ನು ಕೊಟ್ಟರೆ ಇದೊಂದು ಅತ್ಯುತ್ತಮ ತರಬೇತಿ ಕೇಂದ್ರವಾಗುತ್ತದೆ. ಒಂದು ತರಬೇತಿ ಕೇಂದ್ರ ಮಾತ್ರ ಬನ್ನಡ್ಕದಲ್ಲಿ ನಡೆಯುತ್ತಿದೆ. ಇದಕ್ಕೆ ನಾವು ಅಸಡ್ಡೆ ತೋರಿಸಿದರೆ ಅದೂ ಸಹ ಮುಚ್ಚುವ ಸಂದರ್ಭ ಬರುತ್ತದೆ. ಇವತ್ತು ಶಿಕ್ಷಕರ ನೇಮಕ ಆದಷ್ಟು ಬೇಗ ಎಂದರೆ ಎಷ್ಟು ದಿವಸಗಳಲ್ಲಿ ಮಾಡುತ್ತೇವೆಂದು ಹೇಳಬೇಕು. ಅಧ್ಯಾಪಕರ ತೊಂದರೆಯಿಂದ ವಿದ್ಯಾರ್ಥಿಗಳು ಬಹಳ ಸಂಕಟ ಪಡುತ್ತಿದ್ದಾರೆ. ಸಾಕಷ್ಟು ತರಬೇತಿ ಇಲ್ಲ. ತಾವು ಈ ಸಾರಿ ಜಿಲ್ಲೆಗೆ ಪ್ರವಾಸ ಬಂದಾಗ ಖಂಡಿತ ಅಲ್ಲಿಗೆ ಹೋಗಬೇಕು. ಹೋದರೆ ಅಲ್ಲಿನ ಪರಿಸ್ಥಿತಿ ಗೊತ್ತಾಗುತ್ತದೆ. ಲಕ್ಷೋಪಲಕ್ಷ ರೂಪಾಯಿಗಳನ್ನು ಕೊಟ್ಟು ತಂದಿರುವ ಯಂತ್ರೋಪಕರಣಗಳ ಪೆಟ್ಟಿಗೆಯನ್ನು ಕಳೆದ 3 ವರ್ಷಗಳಿಂದ ಹಾಗೆಯೇ ಇಟ್ಟಿದ್ದು ಅವೂ ಕೂಡ ಹಾಳಾಗಿ ಬಿದ್ದಿವೆ. ಇವುಗಳ ಪ್ರಯೋಜನ ಅವರಿಗೆ ಆಗಬೇಕು. ಅಲ್ಲಿಗೆ ಅಧ್ಯಾಪಕರನ್ನು ಯಾವಾಗ ನೇಮಕ ಮಾಡುತ್ತೀರಿ? ಯಾವಾಗ ತಾವು ಸಂದರ್ಶನ ನೀಡುತ್ತೀರಿ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಆ ತರಬೇತಿ ಕೇಂದ್ರವನ್ನು ಅಲ್ಲಿಂದ ವರ್ಗಾಯಿಸುವ ಆಲೋಚನೆ ಸರ್ಕಾರಕ್ಕೆ ಇಲ್ಲ. ಅದು ಆ ಸ್ಥಳದಲ್ಲೇ ಮುಂದುವರಿಯುತ್ತದೆ. ಮತ್ತು ಅಲ್ಲಿಗೆ ಒಬ್ಬ ಶಿಕ್ಷಕರನ್ನು ನೇಮಿಸುವ ಬಗ್ಗೆ ನಾನು ಮೊದಲೇ ಹೇಳಿದಹಾಗೆ ಅದು ಸರ್ಕಾರದ ಗಮನಕ್ಕೆ ಬಂದಿದ್ದು ಆರ್ಥಿಕ ಇಲಾಖೆಯ ಒಪ್ಪಿಗೆ ಪಡೆಯಲು ಕಳುಹಿಸಲಾಗಿದೆ. ಒಪ್ಪಿಗೆ ಬಂದತಕ್ಷಣವೇ ಆ ಭಾಗದಲ್ಲಿ ಶಿಕ್ಷಕರನ್ನು ನೇಮಿಸುವ ತೀರ್ಮಾನ ತೆಗೆದುಕೊಳ್ಳುತ್ತೇವೆ. ಮತ್ತು ನನ್ನ ಪ್ರವಾಸ ಕಾರ್ಯಕ್ರಮದಲ್ಲಿ ಆ ಘಟಕಕ್ಕೆ ಭೇಟಿ ಕೊಟ್ಟು ಅಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸುವ ವ್ಯವಸ್ಥೆ ಮಾಡುತ್ತೇನೆ.

ರೇಷ್ಮೆ ಗೂಡಿನ ಬೆಲೆ ಇಳಿಮುಖವಾಗಿರುವ ಬಗ್ಗೆ

554 - ಶ್ರೀ ಡಿ.ಆರ್. ಪಾಟೀಲ (ಗದಗ್) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಗೂಡಿನ ಬೆಲೆ ಗಣನೀಯವಾಗಿ ಇಳಿದಿರುವುದರಿಂದ ರೈತರು ರೇಷ್ಮೆ ವ್ಯವಸಾಯ ಕಡಿಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅದನ್ನು ತಡೆಗಟ್ಟಲು ಸರಕಾರದವರು ಯಾವ ಕ್ರಮಗಳನ್ನು ಕೈಗೊಂಡಿರುವರು?

ಇ) ರೇಷ್ಮೆ ಬೆಳೆಗಾರರನ್ನು ಸಂಘಟಿಸಿ ಗೂಡುಗಳನ್ನು ಸಂಸ್ಕರಿಸಿ ನೂಲನ್ನು ಹಾಗೂ ಬಟ್ಟೆಯನ್ನು ಉತ್ಪಾದಿಸುವ ಬಗ್ಗೆ ಸರಕಾರ ಚಿಂತನೆ ಮಾಡುತ್ತಿದೆಯೇ?

ಡಾ॥ ಜಿ. ಪರಮೇಶ್ವರ (ರೇಷ್ಮೆ ಕೃಷಿ ರಾಜ್ಯ ಸಚಿವರು) :

ಅ) ಹೌದು

ಆ) ರೇಷ್ಮೆ ಗೂಡು : ಕಚ್ಚಾ ರೇಷ್ಮೆಗೆ ಕನಿಷ್ಟ : ಬೆಂಬಲ ಬೆಲೆ ನಿಗದಿ ಪಡಿಸುವ ಸಲುವಾಗಿ ಒಂದು ಸಮಿತಿಯನ್ನು ನೇಮಕ ಮಾಡಿದೆ. ಕೇಂದ್ರ ಸರ್ಕಾರದ ಜವಳಿ ಖಾತೆ ಸಚಿವರಿಗೆ ಪತ್ರ ಬರೆದು ಬೇರೆ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿರುವ ರೇಷ್ಮೆಯನ್ನು ನಿಲ್ಲಿಸಬೇಕು ಅಥವಾ ಅದನ್ನು ನಿಯಂತ್ರಿಸಬೇಕೆಂಬ ಬಗ್ಗೆ ಪತ್ರ ಬರೆಯುವುದಿಲ್ಲದೆ ಸರ್ವ ಸದಸ್ಯರ ನಿಯೋಗ ಸನ್ಮಾನ್ಯ ಪ್ರಧಾನಮಂತ್ರಿಗಳ, ಹಣಕಾಸು ಮಂತ್ರಿಗಳ, ಜವಳಿ ಖಾತೆ ಸಚಿವರ ಹಾಗೂ ವಾಣಿಜ್ಯ ಖಾತೆ ಸಚಿವರ ಗಮನಕ್ಕೆ ಆಮದು ಮಾಡಿಕೊಳ್ಳುವ ರೇಷ್ಮೆ ಬಹಳ ಕಡಿಮೆ ಬೆಲೆಗೆ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿರುವುದರಿಂದ ರಾಜ್ಯದಲ್ಲಿ ಉತ್ಪನ್ನವಾಗುವ ಗೂಡಿಗೆ ಮತ್ತು ರೇಷ್ಮೆಗೆ ಬೆಲೆ ಬಹಳ ಕಡಿಮೆ ಆಗಿದ್ದು ಈ ಕೃಷಿಯಲ್ಲಿ ತೊಡಗಿರುವವರು ಕಷ್ಟ-ನಷ್ಟಗಳಿಗೆ ಈಡಾಗಿದ್ದಾರೆ ಎಂಬ ವಿಷಯವನ್ನು ಗಮನಕ್ಕೆ ತರಲಾಗಿದೆ. ಇದರ ಮೇಲೆ ಕೇಂದ್ರ ಸರ್ಕಾರ ಆಜ್ಞೆಯನ್ನು ಈ ಕೆಳಕಂಡ ರೀತಿಯಲ್ಲಿ ಹೊರಡಿಸಿದೆ.

1. ರಫ್ತು ಮಾಡುವ ವಸ್ತುಗಳ ಬೆಲೆಯ ಆಧಾರದ ಮೇಲೆ ಮುಂಗಡ ರಹದಾರಿ ಕೊಡುವ ಬದಲಾಗಿ ರಫ್ತು ಮಾಡಲು ಉಪಯೋಗಿಸದ ರೇಷ್ಮೆಯ ಪ್ರಮಾಣದ ಮೇಲೆ ಮುಂಗಡ ರಹದಾರಿ ನೀಡುವುದು.

2. ರೇಷ್ಮೆ ವಸ್ತುಗಳನ್ನು ಸಿದ್ಧ ಉಡುಪುಗಳನ್ನು ಹಾಗೂ ಇತರೆ ವಸ್ತುಗಳನ್ನು ರಫ್ತು ಮಾಡುವುದಕ್ಕೆ ಮುನ್ನ ಕೇಂದ್ರ ರೇಷ್ಮೆ ಮಂಡಳಿಯವರು ಪರಿಶೀಲಿಸಿ ಒಪ್ಪಿಗೆ ನೀಡುವುದು.

3. ರಫ್ತು ಮಾಡಿರುವ ಮಾಡಬೇಕೆಂದಿರುವ ಒಂದು ಕೆ.ಜಿ. ರೇಷ್ಮೆಗೆ 1.40 ಕೆ.ಜಿ. ಬದಲಾಗಿ 1.20 ಕೆ.ಜಿ. ರೇಷ್ಮೆಯನ್ನು ಆಮದು ಮಾಡಿಕೊಳ್ಳುವುದು.

ಇ) ರೇಷ್ಮೆ ಬೆಳೆಗಾರರ ಸಂಘಗಳನ್ನು ಗುಲ್ಬರ್ಗಾ ಜಿಲ್ಲೆಯ ಆಳಂದ ಮತ್ತು ಜೇವರ್ಗಿಯಲ್ಲಿ ಸ್ಥಾಪಿಸಿ ಎನ್ ಸಿ ಡಿ ಸಿ ಮೂಲಕ ಸಾಲ ಸೌಲಭ್ಯ ಒದಗಿಸಿ ಗೂಡುಗಳನ್ನು ಸಂಸ್ಕರಿಸಿ ನೂಲನ್ನು ಉತ್ಪಾದನೆ ಮಾಡುವ ಘಟಕಗಳನ್ನು ಸ್ಥಾಪಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಈ ವ್ಯವಸ್ಥೆ ಚೆನ್ನಾಗಿ ನಡೆದು ರೈತರಿಗೆ ಅನುಕೂಲವಾದರೆ ಇದೇ ರೀತಿ ಬೇರೆ ಜಿಲ್ಲೆಗಳಲ್ಲಿ ಕೂಡ ವ್ಯವಸ್ಥೆ ಮಾಡಲಾಗುವುದು.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಆಳಂದ ಮತ್ತು ಜೇವರ್ಗಿಯಲ್ಲಿ ಸ್ಥಾಪಿಸಿರುವ ಸಂಸ್ಥೆಗಳಲ್ಲಿನ ವ್ಯವಸ್ಥೆ ಚೆನ್ನಾಗಿ ನಡೆದು ಅನುಕೂಲವಾದರೆ ಬೇರೆ ಕಡೆಯೂ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತು ಅವು ಚೆನ್ನಾಗಿ ನಡೆಯುವ ದಾರಿಯನ್ನು ಕಾಯದೇ ಗದಗ್‌ನಲ್ಲಿ ರೇಷ್ಮೆ ಬೆಳೆಗಾರರು ಈಗಾಗಲೇ ರೇಷ್ಮೆ ಬೆಳೆಯುವುದನ್ನು ಬಂದ್ ಮಾಡುತ್ತಾ ಇರುವುದನ್ನು ದೃಷ್ಟಿಯಲ್ಲಿ ಇಟ್ಟು ಅವರನ್ನು ಸಂಘಟಿಸಿ ಸಹಕಾರಿ ಸಂಸ್ಕರಣಾ ಘಟಕ ಸ್ಥಾಪನೆ ಮಾಡಲು ಅವರು ಮುಂದೆ ಬಂದರೆ ತಾವು ಸಹಾಯ ಮಾಡುವ ಭರವಸೆಯನ್ನು ಕೊಡುತ್ತೀರಾ?

ಡಾ॥ ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೇ, ಆಳಂದ ಮತ್ತು ಜೇವರ್ಗಿಯಲ್ಲಿ ಈ ಘಟಕಗಳಿಗೆ ಸ್ಥಾಪನೆ ಮಾಡುವುದಕ್ಕೆ 21 ಹಾಗೂ 10 ಲಕ್ಷ ರೂಪಾಯಿ ಸಹಾಯಧನವನ್ನು ನಾವು ಕೊಟ್ಟಿದ್ದೇವೆ. ಈ ಎರಡು ಸಹಕಾರಸಂಘಗಳು ಪ್ರಾಯೋಗಿಕವಾಗಿ ನೂಲು ಬಿಚ್ಚುವ ಘಟಕಗಳು. ಆದರೆ ಇವು ನಡೆಯುತ್ತವೋ ಇಲ್ಲವೋ ಎಂದು ನೋಡಬೇಕು. ಇವು ಇನ್ನೂ ಕೂಡಾ ಸ್ಥಾಪನೆ ಹಂತದಲ್ಲಿದ್ದಾವೆ. ಇವರು ಸ್ಥಾಪನೆ ಮಾಡಿ ಮೆಷಿನರಿ ಉಪಯೋಗಿಸಿಕೊಂಡು ಚೆನ್ನಾಗಿ ನಡೆಸುತ್ತೇವೆನ್ನುವ ಭರವಸೆಯನ್ನು ಗದಗ್‌ನಲ್ಲಿ ಈ ಬೆಳೆಗಾರರ ಸಂಘ ಕೊಡುವುದಾದರೆ ಖಂಡಿತವಾಗಿ ನಾವು ಸರ್ಕಾರದಿಂದ ಸಹಾಯಧನ ಕೊಡಿಸುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೆಲವು ವಿಧಾನಸಭಾ ಸದಸ್ಯರು ಮತ್ತು ಇತರರು ದೆಹಲಿಗೆ ಹೋಗಿ ರೇಷ್ಮೆ ಗೂಡಿನ ಬೆಲೆ ಇಳಿಯುತ್ತಿದ್ದು ಅದಕ್ಕೆ ಉತ್ತೇಜನ ಕೊಡುವ ಸಲುವಾಗಿ ಕೇಳಲು ಹೋಗಿದ್ದರು. ಆಗ ಯಾರನ್ನು ಭೇಟಿ ಮಾಡಿದ್ದರು ಹಾಗೂ ಅದರ ಫಲಿತಾಂಶ ಏನು ಎಂಬುದನ್ನು ಹೇಳಬೇಕು.

ಡಾ॥ ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೇ, ಒಂದು ನಿಯೋಗವನ್ನು ಕೇಂದ್ರಕ್ಕೆ ತೆಗೆದುಕೊಂಡು ಹೋಗುತ್ತೇನೆಂದು ನಾನು ಆಶ್ವಾಸನೆ ಕೊಟ್ಟ ಪ್ರಕಾರ ನಾವು ಹೋಗಿ ಭೇಟಿ ಮಾಡಿದಾಗ ನಮಗೆ ಕೇಂದ್ರ ಸರ್ಕಾರದವರು ಆಶ್ವಾಸನೆ ಕೊಟ್ಟರು. ಕಚ್ಚಾ ರೇಷ್ಮೆ ಮತ್ತು ಗೂಡಿನ ಬೆಲೆ ಕಡಿಮೆ ಆಗಿತ್ತು. ಈಗಲೂ ಕೂಡಾ ಅದೇ ಮಟ್ಟದಲ್ಲಿ ಇದೆ. ಕೇಂದ್ರದವರೂ ಕೂಡ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಕೇಂದ್ರ ಸರ್ಕಾರದವರು ಕಳೆದ ತಿಂಗಳು 20ನೇ ತಾರೀಖು ಒಂದು ಆರ್ಡರ್ನ್ನು ಹೊರಡಿಸಿದ್ದಾರೆ. ತಾವು ಅಪ್ಪಣೆ ಕೊಟ್ಟರೆ ನಾನು ಅದನ್ನು ಓದುತ್ತೇನೆ.

"The attention is invited to paragraph 49 of the Export Import Policy which provides for grant of value based advance licences under duty exemption scheme. It has been decided that for the export of silk, textiles including ready-made garments, hosiery and knitwears where in silk is used, the value based advance licensing scheme shall not be available. For the export of these products, only quantity based advance licensing scheme shall be available.

ಅದರ ಜೊತೆಗೆ ಇನ್ನೊಂದು ಆರ್ಡರನ್ನು ಮಾಡಿದ್ದಾರೆ. ಅದರಲ್ಲಿ ಪ್ರೀಷಿಪ್ಮೆಂಟ್ ಇನ್ಸ್ಪೆಕ್ಷನ್ ಇಂಪೋರ್ಟ್ ಮಾಡಿಕೊಳ್ಳುತ್ತಿದ್ದರೆ ಅದನ್ನು ಎಕ್ಸ್ಪೋರ್ಟ್ ಮಾಡುವಾಗ ಪ್ರೀಷಿಪ್ಮೆಂಟ್ ಇನ್ಸ್ಪೆಕ್ಷನ್ ಇರುತ್ತಿರಲಿಲ್ಲ. ಅದನ್ನೂ ಕೂಡ ಈಗ ಇಂಟರ್ಡ್ಯೂಸ್ ಮಾಡಿದ್ದಾರೆ. The matter has been reconsidered in consultation with the Ministry of Textiles. The requirement of pre-shipment inspection by Central Silk Board relating to export of silk products under duty exemption is reintroduced with immediate effect. ಈ ಎರಡೂ ಕಾರ್ಯಕ್ರಮವನ್ನು ಅವರು ಮಾಡಿದ್ದಾರೆ. ಇನ್ನು ಒಂದೆರಡು ತಿಂಗಳುಗಳಲ್ಲಿ ಅದರ ಎಫೆಕ್ಟ್ ಮಾರ್ಕೆಟ್ನಲ್ಲಿ ಗೊತ್ತಾಗುತ್ತದೆ. ಬೆಲೆ ಹೆಚ್ಚಾಗುತ್ತದೆ. ಅದರ ಜೊತೆಗೆ ರಾಜ್ಯ ಸರ್ಕಾರದಲ್ಲಿ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಒಂದು ರೀತಿಯ ಕನಿಷ್ಠ ಬೆಲೆಯನ್ನು ಕೊಡುವ ಬಗ್ಗೆ ವೈಜ್ಞಾನಿಕವಾಗಿ ವಿಚಾರ ಮಾಡಬೇಕೆಂದು ಒಂದು ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿ 15 ದಿವಸಗಳಲ್ಲಿ ರಿಪೋರ್ಟ್ ಕೊಡುವುದು ಇದೆ. ಅದು ಕೊಟ್ಟ ನಂತರ ಒಂದು ಕೆ.ಜಿ. ಕಚ್ಚಾ ರೇಷ್ಮೆಯನ್ನು ಉತ್ಪಾದನೆ ಮಾಡುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆಂಬುದನ್ನು ನಾವು ಗಮನದಲ್ಲಿಟ್ಟುಕೊಂಡು ಅದರ ಜೊತೆಗೆ 5-10 ಪರ್ಸೆಂಟ್ ರೀಲರ್ಗಳಿಗೆ ಪ್ರಾಫಿಟ್ ಬರುವ ಹಾಗೆ ಕನಿಷ್ಠ ಬೆಲೆಯನ್ನು ನಿಗದಿ ಮಾಡುತ್ತೇವೆ. ಆ ರಿಪೋರ್ಟ್ ಬಂದ ನಂತರ ಕ್ರಮ ತೆಗೆದುಕೊಳ್ಳುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಚಿವರು ಕೇಂದ್ರ ಸರ್ಕಾರದ ಒಂದು ಪತ್ರವನ್ನು ಓದಿದರು. ಅದರಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಮಂತ್ರಿಗಳಿಗೆ ಕೆಲವು ವಿಷಯಗಳನ್ನು ಬಚ್ಚಿಟ್ಟಿದ್ದಾರೆ. ಅದನ್ನು ಅವರ ಗಮನಕ್ಕೆ ತರುವುದಕ್ಕೆ ಎದ್ದುನಿಂತಿದ್ದೇನೆ. ಎಕ್ಸ್ಪೋರ್ಟ್ ಎಕ್ಸ್ಪೋರ್ಟ್ ಪಾಲಿಸಿ ಬಗ್ಗೆ ಓದಿದ್ದಾರೆ.

Are you aware that silk cocoons have been removed from the negative list in the EXIMP policy?

ರೇಷ್ಮೆ ಗೂಡನ್ನು ನೆಗೆಟಿವ್ ಲಿಸ್ಟಿನಿಂದ ಕೇಂದ್ರ ಸರ್ಕಾರದವರು ತೆಗೆದಿದ್ದಾರೆ. ರೇಷ್ಮೆನೂಲನ್ನು ಆಮದು ಮಾಡುವುದರಿಂದ ಬೆಲೆ ಬಿದ್ದಿದೆ. ರೇಷ್ಮೆಗೂಡನ್ನು ಎಕ್ಸ್ಪೋರ್ಟ್ ಇಂಪೋರ್ಟ್ ನೆಗೆಟಿವ್ ಲಿಸ್ಟಿನಿಂದ ತೆಗೆದರೆ ಏನಾಗುತ್ತದೆನ್ನುವುದನ್ನು ಗಮನದಲ್ಲಿಟ್ಟುಕೊಂಡು ನೀವು ಕೆಲಸ ಮಾಡಬೇಕು. ಇದು ಮೊದಲನೆಯದು. ಇನ್ನು ಎರಡನೆಯದು, ಸಮಿತಿ ಯಾವ ಆಧಾರದ ಮೇಲೆ ಬೆಲೆ ನಿಗದಿ ಮಾಡುತ್ತದೆ? ಕಕ್ಕೂನಿಗೆ ಬೆಲೆ ನಿಗದಿ ಮಾಡುವಾಗ ಬಹಳ ಎಚ್ಚರಿಕೆಯಿಂದ ಮಾಡಬೇಕು. ಏಕೆಂದರೆ ಒಂದು ಕೆ.ಜಿ. ನೂಲನ್ನು ತೆಗೆಯಬೇಕಾದರೆ ಎಷ್ಟು ಗೂಡುಬೇಕಾಗುತ್ತವೆನ್ನುವ ಆಧಾರದ ಮೇಲೆ ಮಾಡುತ್ತೀರಾ ಅಥವಾ ಎಷ್ಟು ಕೆ.ಜಿ. ಗೂಡು ಬೇಕು ಎನ್ನುವ ಆಧಾರದ ಮೇಲೆ ಮಾಡುತ್ತೀರಾ?

ಡಾ॥ ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ನಂಜುಂಡಸ್ವಾಮಿಯವರು ಕೇಳಿದ ಪ್ರಶ್ನೆ ಬಹಳ ಸೂಕ್ತವಾಗಿದೆ. ಈಗಾಗಲೇ ನಾವು ಅದರ ಬಗ್ಗೆ ಗಮನಹರಿಸಿದ್ದೇವೆ. ಕೇಂದ್ರ ಸರ್ಕಾರ ಇವತ್ತಿನ ದಿವಸ ನೆಗೆಟಿವ್ ಲಿಸ್ಟಿಂದ ಇದನ್ನು ತೆಗೆದಿದ್ದಾರೆ. ಯಾರೂ ಕೂಡ ಸಿಲ್ಕನ್ನು ಇಂಪೋರ್ಟ್ ಮಾಡುವುದಕ್ಕೆ ಅವಕಾಶವಿಲ್ಲ. ಆದರೆ ಅಡ್ವಾನ್ಸ್ ಲೈಸೆನ್ಸ್ ಸ್ಕೀಮ್ನಲ್ಲಿ ಸಿಲ್ಕ್ ತೆಗೆದುಕೊಂಡು ಬರಬೇಕಾಗಿದೆ. ಅದನ್ನು ಕೂಡ ಕ್ವಾಲಿಟಿ ಬೇಸ್ಡ್ ಮಾಡಿದ್ದಾರೆ. ಅದರಿಂದ ನಮಗೂ ಅನುಕೂಲವಾಗುತ್ತದೆ. ಆದರೆ ಗೂಡನ್ನು ನೆಗೆಟಿವ್ ಲಿಸ್ಟಿಂದ ತೆಗೆದಿರುವುದು ನಮ್ಮ ಗಮನಕ್ಕೆ ಬಂದಿದೆ. ನಾವು ಕೇಂದ್ರ ಸರ್ಕಾರದ ಗಮನಕ್ಕೆ ಇದನ್ನು ತಂದು ನೆಗೆಟಿವ್ ಲಿಸ್ಟಿಂದ ತೆಗೆದುಹಾಕಬಾರದು ಇಂಪೋರ್ಟ್ ಮತ್ತು ಎಕ್ಸ್ಪೋರ್ಟ್ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ಮೆಮೊರ್ಯಾಂಡಮ್ ಸಬ್ಮಿಟ್ ಮಾಡುತ್ತಿದ್ದೇವೆ. ಅದರ ಜೊತೆಗೆ ಯಾವುದೇ ಬೆಲೆಯನ್ನು ನಿಗದಿ ಮಾಡಿದಾಗ ಕನಿಷ್ಟ ಬೆಲೆಯನ್ನು ನಿಗದಿ ಮಾಡುವ ಸಂದರ್ಭದಲ್ಲಿ ಒಂದು ಕೆ.ಜಿ. ಕಚ್ಚಾ ರೇಷ್ಮೆಯನ್ನು ಉತ್ಪಾದನೆ ಮಾಡಬೇಕಾದರೆ ಎಷ್ಟು ಕೆ.ಜಿ. ಗೂಡು ಉಪಯೋಗ ಮಾಡಬೇಕಾಗುತ್ತದೆನ್ನುವ ಆಧಾರದ ಮೇಲೆ ನಾವು ಈಗಾಗಲೇ ವರ್ಕ್ಔಟ್ ಮಾಡಿದ್ದೇವೆ ಇದಕ್ಕೆ 990 ರೂಪಾಯಿ ಹಣ ಖರ್ಚಾಗುತ್ತದೆ. ಲೇಬರ್ ಎಲ್ಲಾ ಸೇರಿಸಿ ಒಂದು ಕೆ.ಜಿ. ಗೂಡನ್ನು ಉತ್ಪಾದನೆ ಮಾಡಬೇಕಾದರೆ 990 ರೂಪಾಯಿ ಖರ್ಚಾಗುತ್ತದೆ. ಇದರ ಜೊತೆಗೆ ನಾನು ಮೊದಲೇ ಹೇಳಿದ ಹಾಗೆ 5-10 ಪರ್ಸೆಂಟ್ ರೀಲರ್ಗಳಿಗೆ ಪ್ರಾಫಿಟ್ ಬರಬೇಕಾದರೆ 1138 ರೂಪಾಯಿಯಾಗುತ್ತದೆಂದು ನಾವು ಲೆಕ್ಕ ಹಾಕಿದ್ದೇವೆ. ಈವೊಂದು ಆಧಾರದ ಮೇಲೆ ಅದನ್ನು ಫೈನಲೈಸ್ ಮಾಡಿಲ್ಲ. ಅದನ್ನು ವಿಚಾರ ಮಾಡುತ್ತಿದ್ದೇವೆ. ಈ ಆಧಾರದ ಮೇಲೆ ನಾವು ನಿಗದಿ ಮಾಡುವವರಿದ್ದೇವೆ. ಅದರ ಜೊತೆಗೆ ಗೂಡಿನ ಹಂತದಲ್ಲಿ ನಾವು ಮಾಡಬೇಕು ಅಂದರೆ ಬಹಳಷ್ಟು ಹಣ ಬೇಕಾಗುತ್ತದೆ. ಸುಮಾರು 400 ಕೋಟಿ ರೂಪಾಯಿ ಬೇಕಾಗುತ್ತದೆ. 70 ಸಾವಿರ ಮೆಟ್ರಿಕ್ ಟನ್ ನಮ್ಮಲ್ಲಿ ಉತ್ಪಾದನೆಯಾಗುತ್ತಿದೆ. ಅದನ್ನೂ ಕೂಡ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಇನಿಷಿಯೇಟಿವ್ ತೆಗದುಕೊಂಡು 2-3 ಕೆಲಸಗಳನ್ನು ಮಾಡಿರುವುದಕ್ಕೆ, ಕೇಂದ್ರ ಸರ್ಕಾರದವರು ಇದರ ಕಡೆ ಗಮನಕೊಟ್ಟು, ನಮಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ, ನಾನು ಮಾನ್ಯಮಂತ್ರಿಗಳಿಗೆ ಕೇಳಿಕೊಳ್ಳತಕ್ಕಂಥದ್ದು ಏನೆಂದರೆ, ಕೇಂದ್ರಸರ್ಕಾರ ಆಜ್ಞೆ ಮಾಡಿರುವಂಥಾದ್ದು ನಿಜ. ಆದರೆ, ರೇಷ್ಮೆ ಗೂಡನ್ನು ಬೆಳೆಯತಕ್ಕ ರೈತರಿಗೆ ಯಾವುದೇ ರೀತಿಯ ಪ್ರಯೋಜನ ಸಿಗಲಿಲ್ಲ. ಕನಿಷ್ಟ ಎರಡು ತಿಂಗಳ ಒಳಗೆ, ಈ ಸಮಸ್ಯೆಯನ್ನು ಬಗೆಹರಿಸತಕ್ಕ ಆಶ್ವಾಸನೆ ಕೊಡುವುದಕ್ಕೆ ಸಾಧ್ಯವೇ?

ಡಾ॥ ಜಿ. ಪರಮೇಶ್ವರ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಹಾಗೆ, ಇನ್ನು 15 ದಿವಸದೊಳಗೆ ಆ ರಿಪೋರ್ಟ್ ಬರುತ್ತದೆ. ಒಂದು ಸಪ್ಲೋರ್ಟ್ ಪ್ರೈಸ್ ನಾವೇನಾದರೂ ಮಾಡುವುದಾದರೆ, ಎಷ್ಟು ಹಣ ಸರ್ಕಾರದಿಂದ ಬರಬೇಕಾಗುತ್ತದೆ ಎನ್ನುವುದನ್ನೂ ಕೂಡ ನಿಗದಿಪಡಿಸಬೇಕಾಗುತ್ತದೆ. ಈ ದಿಸೆಯಲ್ಲಿ ಕಮಿಟಿ ರಿಪೋರ್ಟ್ ಬಂದನಂತರ ಕ್ರಮ ತೆಗೆದುಕೊಳ್ಳುತ್ತೇವೆ. ಎರಡನೆಯದೆಂದರೆ, ಕೇಂದ್ರ ಸರ್ಕಾರದವರು, ಇಷ್ಟು ಮಾಡಿದ್ದಾರೆ, ಇದು ಸಮಾಧಾನ ತರುತ್ತದೆ ಎನ್ನುವ ವಿಚಾರ ಅಲ್ಲ. ಏಕೆಂದರೆ, ಇಷ್ಟು ಮಾಡಿದರೂ ಸಹ, ಇನ್ನೂ ಮಾರ್ಕೆಟ್‌ನಲ್ಲಿ ಬೆಲೆ ನಿಯಂತ್ರಣ ಆಗಲಿಲ್ಲ. ಆ ಉದ್ದೇಶದಿಂದಲೇ ಈ ಕಮಿಟಿಯನ್ನು ಮಾಡಿದ್ದೇವೆ, ಅವರಿಂದ ರಿಪೋರ್ಟ್ ಬಂದನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಕೆ.ಎಸ್.ಐ.ಸಿ.ಯನ್ನು ಮುಚ್ಚುವ ಬಗ್ಗೆ

653 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರೇಷ್ಮೆ ಕೈಗಾರಿಕೆ ನಿಗಮವು ಕಳೆದ ನಾಲ್ಕು ವರ್ಷಗಳಿಂದ ಅನುಭವಿಸಿದ ನಷ್ಟ ಎಷ್ಟು? (ವರ್ಷವಾರು ವಿವರಗಳನ್ನು ನೀಡುವುದು)

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? ಇದರ ನಿವಾರಣೆಗೆ ತೆಗೆದುಕೊಂಡ ಕ್ರಮಗಳೇನು?

ಇ) ನಿಗಮವು ಹಲವಾರು ವರ್ಷಗಳಿಂದ ಸತತವಾಗಿ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿರುವುದಿಂದ ಕೆ.ಎಸ್.ಐ.ಸಿ. ಯನ್ನು ಮುಚ್ಚಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಒಂದು ವೇಳೆ ಮುಚ್ಚದಿದ್ದಲ್ಲಿ ಕೆ.ಎಸ್.ಐ.ಸಿ.ಯನ್ನು ಲಾಭಗಳಿಯವರಿಗೆ ಮಾರಾಟ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಡಾ॥ ಜಿ. ಪರಮೇಶ್ವರ್ (ರೇಷ್ಮೆ ರಾಜ್ಯ ಸಚಿವರು) :

ಅ) ಕಳೆದ ನಾಲ್ಕು ವರ್ಷಗಳಲ್ಲಿ ಕೆ.ಎಸ್.ಐ.ಸಿ. ಅನುಭವಿಸಿದ ನಷ್ಟದ ವಿವರ ಈ ಕೆಳಗೆ ನಮೂದಿಸಲಾಗಿದೆ.

(ರೂ. ಲಕ್ಷಗಳಲ್ಲಿ)

1989-90	1990-91	1991-92	1992-93
ರೂ.	ರೂ.	ರೂ.	ರೂ
466.64	347.25	43.03	56.94 (ತಾತ್ಕಾಲಿಕ)

ಆ) 1.ಸಾಲದ ಮೇಲಿನ ಪ್ರತಿ ವರ್ಷದ ಅಧಿಕ ಬಡ್ಡಿಯ ಹೊರೆ

1989-90	1990-91	1991-92	1992-93
ರೂ.	ರೂ.	ರೂ.	ರೂ
341.39	330.05	232.48	242.63

2. ಪ್ರತಿ ವರ್ಷದ ಅಧಿಕ ಅಪಮೂಲಿನ್ಯ (ಡಿಪ್ರಿಷಿಯೇಷನ್)

1989-90	1990-91	1991-92	1992-93
ರೂ.	ರೂ.	ರೂ.	ರೂ
221.42	222.87	218.61	221.20

ಸಂಸ್ಥೆಯು ರೋಗಗ್ರಸ್ಥವಾಗಿದ್ದುದರಿಂದ ಅದನ್ನು ಪುನಶ್ಚೇತನಗೊಳಿಸುವ ಸಲುವಾಗಿ ಐ.ಡಿ.ಬಿ.ಐ. (ಲೀಡ್ ಬ್ಯಾಂಕನ್ನು ಕೋರಲಾಗಿತ್ತು). ಪ್ರತಿಯಾಗಿ ಐ.ಡಿ.ಬಿ.ಐ.ನವರು